

ಒಂದು ಸ್ವಾಗತ ಕಮಾನು

# ಹಾದಿಗಳೆಲ್ಲ ರೋಮಿನತ್ತ

**ತನ್ನ ವೈಭವದ ದಿನಗಳಲ್ಲಿ ಜಗತ್ತಿನ ಕೇಂದ್ರವಾಗಲು ಹಂಬಲಿಸಿದ್ದ ಇಟಲಿಯ ರೋಮ್ ಈಗ ಹೇಗಿದೆ? ರೋಮ್‌ನ ಚರಿತ್ರೆ–ವರ್ತಮಾನದ ಓಣಿಗಳಲ್ಲಿ ಸಹೃದಯರನ್ನು ಕರೆದೊಯ್ಯುವ ಈ ಕಥನ, ಚರಿತ್ರೆಯ ತಿರುಗಣೆಯಲ್ಲಿ ನಾಟಕೀಯವಾಗಿ ಬದಲಾದ ನಗರ–ಸಂಸ್ಕೃತಿಯನ್ನು ವಿಸ್ಮಯ, ವಿಷಾದ, ಮರುಕಗಳ ನೆಲೆಗಟ್ಟಿನಲ್ಲಿ ಕಾಣಿಸುತ್ತದೆ.**

■ ರಹಮತ್ ತರೀಕೆರೆ


ವ್ಯಾಟಿಕನ್‌ನ ಇಣುಕುನೋಟ

ಪ್ರಾಚೀನ ಕಾಲದ ಬೃಹತ್ ಕ್ರೀಡಾಂಗಣಗಳಲ್ಲಿ ಒಂದಾಗಿರುವ ರೋಮಿನ ಕಲೋಸಿಯಂ ಮುಂದೆ ನಿಂತರೆ ಎದೆ ಝಲ್ಲೆನಿಸುತ್ತದೆ. ಎತ್ತರದ ಬಾಳೆಕಾಂಡದಂತಹ ನುಣ್ಗಂಬಗಳು, ಕೋಟೆಯಂತಹ ಹೊರಗೋಡೆ, ಅರವತ್ತು ಸಾವಿರ ಮಂದಿ ಕೂರುವ ಮೆಟ್ಟಿಲಗ್ಯಾಲರಿ, ಕೆಳಗೆ ಪಾತಾಳದಲ್ಲಿ ಕ್ರೀಡಾವೇದಿಕೆ – ಎಲ್ಲವನ್ನೂ ಬೃಹತ್ತಾಗಿ ಕಲ್ಪಿಸಿಕೊಂಡು ಕಟ್ಟಿದ ಇಮಾರತಿದು. ರೋಮನ್ ಅವಶೇಷಗಳ ಲಕ್ಷಣವೇ ಬೃಹತ್ತು ಮತ್ತು ಭವ್ಯತೆ. 21 ಶತಮಾನಗಳ ಹಿಂದೆ ಕಟ್ಟಲಾದ ಕಲೋಸಿಯಂ, ಕಾಲನ ಹೊಡೆತಕ್ಕೆ ಸಿಕ್ಕಿ ಸಾಕಷ್ಟು ಜರ್ಝರಿತವಾಗಿದೆ. ಅದರ ಭಗ್ನರೂಪವು ಜರೂರಿಗಿಂತ ದೊಡ್ಡದಾಗಿ ಬೆಳೆದು ನಾಶವಾದ ಡೈನೊಸರಸ್ಸಿನ ಕಂಕಾಲದಂತೆ ಕಾಣುತ್ತದೆ.

ಭವ್ಯ ಕಲೋಸಿಯಂನಲ್ಲಿ ನಡೆಯುತ್ತಿದ್ದ ಕ್ರೀಡೆಗಳನ್ನು ನೆನೆದರೆ, ತುಂಬಿಕೊಂಡ ವಿಸ್ಮಯ ಮಂಜಿನಂತೆ ಕರಗಿ ವಿಷಾದವಾಗುತ್ತದೆ. ಇದರ ವೇದಿಕೆಯಲ್ಲಿ ಹಸಿದ ಮತ್ತು ಕೆಣಕಿಸಿಕೊಂಡ ಸಿಂಹ, ಕರಡಿ, ಗೂಳಿಗಳ ಜತೆ ಗ್ಲಾಡಿಯೇಟರುಗಳು ಜೀವದ ಹಂಗುಬಿಟ್ಟು ಸೆಣಸುತ್ತಿದ್ದರು; ಗೆದ್ದವರು ಸ್ಥಾನಮಾನ ಪಡೆದರೆ, ಸೋತವರು ಛಿದ್ರಗೊಂಡ ಶವವಾಗುತ್ತಿದ್ದರು; ಕೆಲವೊಮ್ಮೆ ಕೈದಿಗಳನ್ನೂ ಗುಲಾಮರನ್ನೂ ಕಾಳಗಕ್ಕೆ ಛೂಬಿಡಲಾಗುತ್ತಿತ್ತು. ಆ ಮಾರಣಾಂತಿಕ ಕಾಳಗವನ್ನು ರೋಮಿನ ನಾಗರಿಕರು ದೊರೆಗಳ ಜತೆ ಕೂತು ವೀಕ್ಷಿಸುತ್ತ ಕೇಕೆ ಹಾಕುತ್ತಿದ್ದರು. ರಕ್ತಸಿಕ್ತ ಕ್ರೀಡೆಯ ಜನಪ್ರಿಯತೆಗೆ ಸಾಕ್ಷಿಯೆಂಬಂತೆ, ರೋಮನ್ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಚಿತ್ರಕಲೆಗಳ ತುಂಬ ಗ್ರ್ಯಾಡಿಯೇಟರುಗಳು ಸಿಂಹ, ಗೂಳಿ, ಸರ್ಪ, ಗರುಡಗಳ ಜತೆ ಸೆಣಸುತ್ತಿರುವ ಸನ್ನಿವೇಶಗಳಿವೆ.

ಪ್ರಾಚೀನರ ಸಾಹಸೀ ಬದುಕಿನ ಪ್ರತಿಬಿಂಬಗಳಂತೆಯೂ ಮಾನವ ಪ್ರತಿಭೆ ಮತ್ತು ಸೃಜನಶೀಲತೆಗಳ ಉತ್ಕೃಷ್ಟ ಫಲಗಳಂತೆಯೂ ಇರುವ ಈಜಿಪ್ತಿನ ಪಿರಮಿಡ್, ಇಸ್ತಾಂಬುಲ್‌ನ ಮಸೀದಿ, ಯೂರೋಪಿನ ಚರ್ಚು, ರಜಪೂತರ ಕೋಟೆ, ಮೊಗಲರ ಕಮಾನುದ್ವಾರ, ಆದಿಲಶಾಹಿ–ಬಹಮನಿಗಳ ಗುಮ್ಮಟ, ಅಮೆರಿಕೆಯ ಸ್ವಾತಂತ್ರ್ಯದೇವಿ ಪ್ರತಿಮೆ, ಮೊದಲಾದ ಎಲ್ಲ


ರೋಮಿನ ಕಲೋಸಿಯಂ